ಮೆ. ಅಗರವಾಲ್ ಸ್ಪಾಂಜ್ ಅಂಡ್ ಎನರ್ಜಿ ಪ್ರೈವೆಟ್ ಲಿಮಿಟೆಡ್ ಇವರು ಕುಡಿತಿನಿ ಗ್ರಾಮ, ಬಳ್ಳಾರಿ ತಾಲ್ಲೂಕು & ಜಿಲ್ಲೆಯಲ್ಲಿ ಕಂಪನಿಯ 1 X 350 ಟಿ.ಪಿ.ಡಿ(ಡಿ.ಆರ್.ಐ) ಗೂಡುಗಳನ್ನು ಸ್ಥಾಪಿಸುವ ಮೂಲಕ ಅಸ್ತಿತ್ವದಲ್ಲಿರುವ ಸ್ಪಾಂಜ್ ಐರನ್ ಮತ್ತು ವಿದ್ಯುತ್ ಸ್ಥಾವರವನ್ನು ವಿಸರಿಸಲು ಯೋಜಿಸುತ್ತಿದ್ದು, 1,05,000 ಟಿ.ಪಿ.ಎ. ಸ್ಪಾಂಜ್ ಕಬ್ಬಿಣವನ್ನು 8 ಮೆಗಾವ್ಯಾಟ್ ಡಬ್ಲ್ಯೂಹೆಚ್ಆರ್‌ಬಿ ಸೌಲಭ್ಯದೊಂದಿಗೆ ಉತ್ಪಾದಿಸಲು, 4 X 30 ಟಿ ಇಂಡಕ್ಷನ್ ಫರ್ನೆಸ್ ಅಸ್ತಿತ್ವದಲ್ಲಿರುವ ಭೂ ಆವರಣದಲ್ಲಿ 20 ಎಕರೆ (8.09 ಹೆಕ್ಟೆರ್) ವ್ಯಾಪ್ತಿಯಲ್ಲಿ 4,18,630 ಟಿ.ಪಿ.ಎ. ಬಿಲ್ಲೆಟ್ಸ್ ಮತ್ತು 4,00,000 ಟಿ.ಪಿ.ಎ ಸಾಮರ್ಥ್ಯದ ರೋಲಿಂಗ್ ಮಿಲ್‌ನಲ್ಲಿ ಕಿರಿದಾದ ಹಾಟ್ ಸ್ಟ್ರಿಪ್ ಅನ್ನು ಉತ್ಪಾದಿಸಲು ಮತ್ತು ಹೆಚ್ಚುವರಿ ಭೂಮಿಯಲ್ಲಿ 24.09 ಎಕರೆ (9.74 ಹೆಕ್ಟೆರ್) ಒಟ್ಟು 17.83 ಹೆಕ್ಟೆರ್(44.09 ಎಕರೆ) ಒಳಗೊಂಡಿರುವ ಸರ್ವೆ ನಂ. 899/A, 899/B, 900,902/B, 907/A, 907/B ಗಳಲ್ಲಿ ಸ್ಥಾವರದ ಸ್ಥಾಪನೆ ಮಾಡುವ ಉದ್ದೇಶಕ್ಕಾಗಿ (ಯೋಜನಾ ಪ್ರದೇಶದಲ್ಲಿ) ದಿನಾಂಕ: 12-08-2022 ರಂದು ಬೆಳಿಗ್ಗೆ 11.00 ಗಂಟೆಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡುವಳಿಗಳು:-

| | | |
|---|---|---|
| ಪರಿಸರ ಕುರಿತಾದ ಸಾರ್ವಜನಿಕ ಆಲಿಕೆ ಸಭೆಯ ಸ್ಥಳ | | ಉದ್ದೇಶಿತ ಯೋಜನಾ ಸ್ಥಳ ಮೆ. ಅಗರವಾಲ್ ಸ್ಪಾಂಜ್ ಅಂಡ್ ಎನರ್ಜಿ ಪ್ರೈವೆಟ್ ಲಿಮಿಟೆಡ್. ಸರ್ವೆ ನಂ. 899/A, 899/B, 900,902/B, 907/A, 907/B ಕುಡತಿನಿ ಗ್ರಾಮ, ಬಳ್ಳಾರಿ ತಾಲ್ಲೂಕು & ಜಿಲ್ಲೆ. |
| ಹಾಜರಿದ್ದ ಪರಿಸರ ಸಾರ್ವಜನಿಕ ವಿಚಾರಣಾ ಸಮಿತಿಯ ಸದಸ್ಯರುಗಳ ವಿವರ | | **ಪದನಾಮ** |
| 1. | ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಜಿಲ್ಲೆ | **ಅಧ್ಯಕ್ಷರು** |
| 2 | ಡಾ.ದೊಡ್ಡಶಾನಯ್ಯ ಹಿರಿಯ ಪರಿಸರ ಅಧಿಕಾರಿಗಳು, ಕ.ರಾ.ಮಾ.ನಿ.ಮಂ. ವಲಯ ಕಛೇರಿ, ಬಳ್ಳಾರಿ. | **ಸದಸ್ಯ ಸಮಾವೇಶಕರು** |
| **ಹಾಜರಿದ್ದ ಅಧಿಕಾರಿಗಳ ವಿವರ** | | |
| 1 | ಶ್ರೀ ಹನುಮಂತಪ್ಪ ಹೆಚ್. ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ.ಪ್ರಾಕ, ಬಳ್ಳಾರಿ | |
| 2 | ಶ್ರೀ ವಿಶ್ವನಾಥ ಹೆಚ್, ತಹಶೀಲ್ದಾರರು, ಬಳ್ಳಾರಿ | |
| 3 | ಶ್ರೀ ಇದಾಯತ್‌ವುಲ್ಲಾ, ಗ್ರಾಮ ಲೆಕ್ಕಾಧಿಕಾರಿ ಕುಡಿತಿನಿ | |
| ಮೆ. ಅಗರವಾಲ್ ಸ್ಪಾಂಜ್ ಅಂಡ್ ಎನರ್ಜಿ ಪ್ರೈವೆಟ್ ಲಿಮಿಟೆಡ್ ವತಿಯಿಂದ ಹಾಜರಿದ್ದ ಪ್ರತಿನಿಧಿಗಳು. | | |
| 1. | ಶ್ರೀ ಮನಿಷ್ ಅಗರವಾಲ್-ಜನರೆಲ್ ಮ್ಯಾನೇಜರ್ | |
| 2. | ಶ್ರೀ ಪ್ರದೀಪ್ ಕುಮಾರ್- ಜನರೆಲ್ ಮ್ಯಾನೇಜರ್ | |
| 3. | ಶ್ರೀ ನಾಗರಾಜ್-ಸಿ.ಇ.ಓ | |
| 4. | ಶ್ರೀ ರವೀಂದ್ರನ್- ಎ.ಜಿ.ಎಮ್. | |
| 5. | ಶ್ರೀ ಸಂದೀಘ್ ಎಮ್.ಎನ್-ಹೆಚ್.ಆರ್.ಮ್ಯಾನೇಜರ್ | |

| | |
|---|---|
| 5 | ಶ್ರೀ ಜಿ. ಜಯಕುಮಾರ್.ಬಿ–ಹೆಚ್.ಆರ್.ಮ್ಯಾನೇಜರ್ |
| 6 | ಶ್ರೀ ಪ್ರಭುದೀಪ್–ಎ.ಜಿ.ಎಮ್. |

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ–1** ರಲ್ಲಿ ಲಗತ್ತಿಸಲಾಗಿದೆ.
2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ–2** ರಲ್ಲಿ ಲಗತ್ತಿಸಲಾಗಿದೆ.

**ಪೀಠಿಕೆ**

ಮೆ. ಅಗರವಾಲ್ ಸ್ಪಾಂಜ್ ಅಂಡ್ ಎನರ್ಜಿ ಪ್ರೈವೆಟ್ ಲಿಮಿಟೆಡ್ ಇವರು ಕುಡಿತಿನಿ ಗ್ರಾಮ, ಬಳ್ಳಾರಿ ತಾಲ್ಲೂಕು & ಜಿಲ್ಲೆಯಲ್ಲಿ ಕಂಪನಿಯ 1 X 350 ಟಿ.ಪಿ.ಡಿ(ಡಿ.ಆರ್.ಐ) ಗೂಡುಗಳನ್ನು ಸ್ಥಾಪಿಸುವ ಮೂಲಕ ಅಸ್ತಿತ್ವದಲ್ಲಿರುವ ಸ್ಪಾಂಜ್ ಐರನ್ ಮತ್ತು ವಿದ್ಯುತ್ ಸ್ಥಾವರವನ್ನು ವಿಸ್ತರಿಸಲು ಯೋಜಿಸುತ್ತಿದ್ದು, 1,05,000 ಟಿ.ಪಿ.ಎ. ಸ್ಪಾಂಜ್ ಕಬ್ಬಿಣವನ್ನು 8 ಮೆಗಾವ್ಯಾಟ್ ಡಬ್ಲ್ಯೂಹೆಚ್ಆರ್‌ಬಿ ಸೌಲಭ್ಯದೊಂದಿಗೆ ಉತ್ಪಾದಿಸಲು, 4 X 30 ಟಿ ಇಂಡಕ್ಷನ್ ಫರ್ನೆಸ್ ಅಸ್ತಿತ್ವದಲ್ಲಿರುವ ಭೂ ಆವರಣದಲ್ಲಿ 20 ಎಕರೆ (8.09 ಹೆಕ್ಟೆರ್) ವ್ಯಾಪ್ತಿಯಲ್ಲಿ 4,18,630 ಟಿ.ಪಿ.ಎ. ಬಿಲ್ಲೆಟ್ಸ್ ಮತ್ತು 4,00,000 ಟಿ.ಪಿ.ಎ ಸಾಮರ್ಥ್ಯದ ರೋಲಿಂಗ್ ಮಿಲ್‌ನಲ್ಲಿ ಕಿರಿದಾದ ಹಾಟ್ ಸ್ಟ್ರಿಪ್ ಅನ್ನು ಉತ್ಪಾದಿಸಲು ಮತ್ತು ಹೆಚ್ಚುವರಿ ಭೂಮಿಯಲ್ಲಿ 24.09 ಎಕರೆ (9.74 ಹೆಕ್ಟೆರ್) ಒಟ್ಟು 17.83 ಹೆಕ್ಟೆರ್(44.09 ಎಕರೆ) ಒಳಗೊಂಡಿರುವ ಸರ್ವೆ ನಂ. 899/A, 899/B, 900,902/B, 907/A, 907/B ಗಳಲ್ಲಿ ಸ್ಥಾವರದ ಸ್ಥಾಪನೆ ಮಾಡುವ ಉದ್ದೇಶಕ್ಕಾಗಿ ಪ್ರಸ್ತಾವನೆಯನ್ನು ಮಾಡಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ 1986 ಅಡಿಯಲ್ಲಿ ದಿನಾಂಕ 14.09.2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ (ತಿದ್ದುಪಡಿ ದಿನಾಂಕ 01.12.2009) ರನ್ವಯ ಯೋಜನಾ ಪ್ರವರ್ತಕರು ಸದರಿ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಸದರಿ ಉದ್ದೇಶಿತ ಯೋಜನೆಯು ಮೇಲೆ ತಿಳಿಸಿದ ಅಧಿಸೂಚನೆ ಅಡಿಯಲ್ಲಿ ಒಳಪಡುವುದರಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.ಆ ಮೇರೆಗೆ ಯೋಜನಾ ಪ್ರವರ್ತಕರು ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆಯ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ ಇವರು ಸದರಿ ಯೋಜನೆಯ ಟರ್ಮ್ಸ್ ಆಫ್ ರೆಫೆರೆನ್ಸ್ (TOR) ಸಂಖ್ಯೆF.No. J--11011/908/2007-IA.II(I) ದಿನಾಂಕ :11–02–2020 ಷರತ್ತುಬದ್ಧ ನಿಬಂಧನೆಗಳ ಅನ್ವಯ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸುವುದು ಕಡ್ಡಾಯವಾಗಿರುತ್ತದೆ.

ಯೋಜನಾ ಪ್ರವರ್ತಕರು ಷರತ್ತುಬದ್ಧ ನಿಬಂಧನೆಗಳನ್ನು ಪಾಲಿಸುವ ಸಲುವಾಗಿ ಮೆ.ಪಯೋನೀರ್ ಎನ್ವಿರೋ ಲ್ಯಾಬೊರೇಟರೀಸ್ & ಕನ್ಸಲ್ಟೆಂಟ್ಸ್ ಪ್ರೈವೆಟ್ ಲಿಮಿಟೆಡ್, ಹೈದ್ರಬಾದ್ ಇವರು ತಯಾರಿಸಿದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ಧಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡಲು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರಿಗೆ ದಿನಾಂಕ 20–11–2020 ರಂದು ಮನವಿ ಸಲ್ಲಿಸಿರುತ್ತಾರೆ.

ಯೋಜನಾ ಪ್ರವರ್ತಕರ ಸದರಿ ಮನವಿಯ ಮೇರೆಗೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆ ನಡೆಸಲು ಸೂಕ್ತ ದಿನಾಂಕ ಹಾಗೂ ಸಮಯವನ್ನು ನೀಡಲು ದಿನಾಂಕ 01-04-2022 ಪತ್ರದ ಮೂಲಕ ಕೋರಲಾಗಿರುತ್ತದೆ.

ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ರವರ ಆದೇಶದನ್ವಯ ದಿನಾಂಕ: 12-08-2022 ರಂದು ಬೆಳಿಗ್ಗೆ. 11.00 ಗಂಟೆಗೆ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಈ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ಹೊಸದಿಗಂತ (ಕನ್ನಡ) ಹಾಗೂ ಟೈಮ್ ಆಫ್ ಇಂಡಿಯಾ (ಆಂಗ್ಲ) ಗಳಲ್ಲಿ ದಿನಾಂಕ 12-07-2022 ರಂದು ಪತ್ರಿಕಾ ಪ್ರಕಟಣೆ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಈ ನಮ್ಮ ಕನ್ನಡ ನಾಡು" ಪತ್ರಿಕೆಯಲ್ಲಿ ಸಹ ದಿನಾಂಕ: 13-07-2022 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು, ನೀಡಲಾಗಿರುತ್ತದೆ. ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗೆ ಸಲ್ಲಿಸಲು ಕೋರಲಾಗಿತ್ತು.

ಸದರಿ ಯೋಜನೆಗೆ ಸಂಬಂಧಿಸಿದಂತೆ ಯೋಜನಾ ಪ್ರವರ್ತಕರು ಸಲ್ಲಿಸಿದ್ದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನದ ವರದಿ ಮತ್ತು ಕಾರ್ಯಕಾರಿ ಸಾರಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇಡಲಾಗಿತ್ತು.

- ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ,
- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ಬಳ್ಳಾರಿ.
- ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ.
- ತಹಶೀಲ್ದಾರರ ಕಾರ್ಯಾಲಯ, ಬಳ್ಳಾರಿ
- ಪಟ್ಟಣ ಪಂಚಾಯತಿ ಕಾರ್ಯಾಲಯ, ಕುಡಿತಿನಿ ಗ್ರಾಮ, ಬಳ್ಳಾರಿ ತಾಲ್ಲೂಕು & ಜಿಲ್ಲೆ
- ವಿಭಾಗಿಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ಕೇಂದ್ರ ಪರಿಸರ ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ-3/240, ಕೇಂದ್ರಿಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯರಸ್ತೆ, 2 ನೇ ಬ್ಲಾಕ್ ಕೋರಮಂಗಲ, ಬೆಂಗಳೂರು-560034
- ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ. 49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560001

ಸದರಿ ಪರಿಸರ ಸಾರ್ವಜನಿಕ ಸಭೆಯ ಕುರಿತು ಮೇಲೆ ತಿಳಿಸಿದ ಎಲ್ಲಾ ಇಲಾಖೆಯವರಿಗೆ ಪರಿಸರ ಸಾರ್ವಜನಿಕ ಸಭೆಯ ದಿನಾಂಕ: 13-07-2022 ರಂದು ನಡೆಯುತ್ತಿರುವ ಕುರಿತು ಹಾಗೂ ಪತ್ರಿಕಾ ಪ್ರಕಟಣೆ ಬಗ್ಗೆ ಮಾಹಿತಿಯನ್ನು ನೀಡಲಾಗಿರುತ್ತದೆ.

ಯೋಜನಾ ಪ್ರದೇಶದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ದೇಶಿತ ವಿಸ್ತರಣಾ ಘಟಕದ ಕುರಿತು ಹಾಗು ಸಾರ್ವಜನಿಕ ಆಲಿಕಾ ಸಭೆ ನಡೆಯುವ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಉದ್ದಿಮೆಯ ಸುತ್ತಮುತ್ತಲಿನ ಹಳ್ಳಿಗಳಾದ (ವೇಣಿವಿರಾಪೂರ, ಕುಡಿತಿನಿ, ಹಗಗಿನದೋಣಿ, ಜಾನೆಕುಂಟೆ, ಜಾನೆಕುಂಟೆ ತಾಂಡ, ಬೆಳಗಲ್ ಮತ್ತು ಬೆಳಗಲ್ ತಾಂಡಾ) ಗಳಲ್ಲಿ ಕರ ಪತ್ರಗಳನ್ನು ಹಂಚಲಾಗಿದ್ದು ಮತ್ತು ಧ್ವನಿವರ್ಧಕಗಳ ಮೂಲಕವು ಸಹ ಪ್ರಚಾರವನ್ನು ದಿನಾಂಕ 11-08-2022 ರಂದು ಮಾಡಲಾಗಿರುತ್ತದೆ. (ಛಾಯಾ ಚಿತ್ರಗಳನ್ನು **ಅನುಬಂಧ-4** ರಲ್ಲಿ ಲಗತ್ತಿಸಿದೆ)

ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ರವರ ಅಧಿಕೃತ ಜ್ಞಾಪನಾ ಪತ್ರದ ದಿನಾಂಕ 25-07-2022 ರ ಅನ್ವಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರಿಗೆ ಅಧಿಕಾರ ನೀಡಿ ದಿನಾಂಕ : 12-08-2022 ರಂದು ನಡೆಯುವ ಪರಿಸರ ಆಲಿಕೆ ಸಭೆಯನ್ನು ನಡೆಸಲು ಆದೇಶಿಸಿರುತ್ತಾರೆ. ಸದರಿ ಜ್ಞಾಪನಾ ಪತ್ರದ ಪ್ರತಿಯನ್ನು (**ಅನುಬಂಧ-5** ರಂತೆ ಲಗತ್ತಿಸಿದೆ)

ಮೇಲೆ ತಿಳಿಸಿದ ಅಧಿಸೂಚನೆಯಲ್ಲಿನ ಎಲ್ಲಾ ವಿಧಿ-ವಿಧಾನಗಳನ್ನು ಕ್ರಮಬದ್ಧವಾಗಿ ನಿಯಮಾನುಸಾರ ಪಾಲಿಸಿ ದಿನಾಂಕ 12-08-2022 ರಂದು ಬೆಳಿಗ್ಗೆ 11.00 ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಇವರ ಅಧ್ಯಕ್ಷತೆಯಲ್ಲಿ ಯೋಜನಾ ಸ್ಥಳವಾದ ಕುಡಿತಿನಿ ಗ್ರಾಮ, ಬಳ್ಳಾರಿ ತಾಲ್ಲೂಕು & ಜಿಲ್ಲೆಯಲ್ಲಿ ಪ್ರಾರಂಭಿಸಲಾಯಿತು.

**ಸಭೆಯ ನಡವಳಿಗಳು**

ಸದಸ್ಯ ಸಮಾವೇಶಕರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ, ಬಳ್ಳಾರಿ ಪ್ರಾದೇಶಿಕ ಕಛೇರಿಯ ಪರಿಸರ ಅಧಿಕಾರಿಗಳಾದ ಡಾ.ದೊಡ್ಡಶಾನಯ್ಯ ಅವರು ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಮತ್ತು ಅವರಿಗೆ ಸ್ವಾಗತ ಕೋರಿದರು. ಮೆ.ಅಗರವಾಲ್ ಸ್ಪಾಂಜ್ ಅಂಡ್ ಎನರ್ಜಿ ಪ್ರೈವೆಟ್ ಲಿಮಿಟೆಡ್ ಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ, ಎಲ್ಲಾ ಸಾರ್ವಜನಿಕರಿಗೆ, ಪತ್ರಕರ್ತರಿಗೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳಿಗೆ ಸ್ವಾಗತ ಕೋರಿದರು ಹಾಗೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಕೇಂದ್ರ ಸರ್ಕಾರ, ಇವರು ಪರಿಸರ(ಸಂರಕ್ಷಣೆ)ಕಾಯ್ದೆ, 1986 ರಡಿಯಲ್ಲಿ ದಿನಾಂಕ : 14-09-2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿದರು. ಸದರಿ ಯೋಜನೆಗೆ ಸಂಬಂಧಪಟ್ಟ ಪ್ರಾಧೀಕಾರದಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುವ ವಿಷಯವನ್ನು ಸಹ ಸಭೆಗೆ ತಿಳಿಸಿದರು. ಸಾರ್ವಜನಿಕ ಪರಿಸರ ಆಲಿಕೆ ಸಭೆಯ ಪೂರ್ವದಲ್ಲಿ ನಿಯಮಾನುಸಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆಯನ್ನು ನೀಡಿದರು ಹಾಗೂ ಸಾರ್ವಜನಿಕ ಆಲಿಕೆಯ ಸಭೆಯ ಅಧ್ಯಕ್ಷತೆಯನ್ನು ವಹಿಸುವಂತೆ ಮತ್ತು ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಪರ ಜಿಲ್ಲಾಧಿಕಾರಿಗಳನ್ನು ಕೋರಿದರು.

ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರು ಸಭೆಯನ್ನು ಉದ್ದೇಶಿಸಿ ಯೋಜನೆಗೆ ಪರಿಸರ ಸಾರ್ವಜನಿಕ ವಿಚಾರಣೆಯನ್ನು ನಡೆಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು. ಪರಿಸರ ಅಘಾತ ಅಧ್ಯಯನ ಅಧಿಸೂಚನೆ ದಿನಾಂಕ: 14-09-2006 ರ ಬಗ್ಗೆ ವಿವರವಾದ ಮಾಹಿತಿಯನ್ನು ಸಭೆಯಲ್ಲಿದ್ದ ಸಾರ್ವಜನಿಕರಿಗೆ ತಿಳಿಸಿದರು ಹಾಗೂ ಪರಿಸರ ಸಾರ್ವಜನಿಕ ವಿಚಾರಣೆಯ ಅಗತ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಪ್ರಸ್ತಾವಿತ ಯೋಜನೆಯ ಪವರ್ ಪಾಯಿಂಟ್ ಪ್ರಸ್ತುತಿಯನ್ನು ನೀಡುವಂತೆ ಅವರು ಯೋಜನಾ ಪ್ರತಿಪಾದಕರಿಗೆ ಮಾಹಿತಿ ನೀಡಿದರು, ಅಲ್ಲಿ ವಿಚಾರಣೆಗೆ ಹಾಜರಿದ್ದ ಸಾರ್ವಜನಿಕರು ಪರಿಸರ ಸಮಸ್ಯೆಗಳ ಕುರಿತು ಉದ್ದೇಶಿತ ಯೋಜನೆಗೆ ತಮ್ಮ ಎಲ್ಲಾ ಅಭಿಪ್ರಾಯ/ಸಲಹೆ/ಪತ್ರಗಳನ್ನು ಯೋಜನೆಯ ಬಗ್ಗೆ ಲಿಖಿತ ಅಥವಾ ಮೌಖಿಕವಾಗಿ ಪ್ರಸ್ತುತಪಡಿಸುವಂತೆ ವಿನಂತಿಸಿಕೊಂಡರು. ಈ ನಡವಳಿಯು ಲಿಖಿತ ದಾಖಲೆ ಮತ್ತು ವಿಡಿಯೋಗ್ರಾಫಿ ಎರಡನ್ನು ಒಳಗೊಂಡಿದೆ ಎಂದು ಸಭೆಗೆ ತಿಳಿಸಿದರು.

ಅದರಂತೆ, ಮೆ ಅಗರವಾಲ್ ಸ್ಪಾಂಜ್ ಅಂಡ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ರವರ ಪರವಾಗಿ ಶ್ರೀ ಮಹದೇವ ರವರು ಮೆ.ಪಯೋನೀರ್ ಎನ್ವಿರೋ ಲ್ಯಾಬೊರೇಟರೀಸ್ & ಕನ್ಸಲ್ಟೆಂಟ್ಸ್ ಪ್ರೈವೆಟ್ ಲಿಮಿಟೆಡ್ ಇವರು ತಯಾರಿಸಿರುವ ಕ್ರಿಯಾತ್ಮಕ ಸಾರಾಂಶದಲ್ಲಿ ತಿಳಿಸಿರುವ ಕ್ರಮಗಳು, ಶಬ್ಧದ ಮಟ್ಟದ ಸುಧಾರಿತ ಕ್ರಮಗಳು, ನೀರಿನ ಗುಣಮಟ್ಟ ಸುಧಾರಿತ ಕ್ರಮಗಳು, ಗಾಳಿಯ ಗುಣಮಟ್ಟ ಸುಧಾರಿತ ಕ್ರಮಗಳು, ಮಣ್ಣಿನ ಗುಣಮಟ್ಟದ ಸುಧಾರಿತ ಕ್ರಮಗಳು, ಜಮೀನಿನ ಬಳಕೆ, ಸಸ್ಸೀಕರಣ ಫೋಟೊಗಳು, ಯೋಜನಾ ಪ್ರದೇಶದೊಳಗಿನ ರಕ್ಷಣಾತ್ಮಕ ಕ್ರಮಗಳು, ಪರಿಸರ ರಕ್ಷಣೆಯ ಬಜೆಟ್ ಚಟುವಟಿಕೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು ಮತ್ತು ಉದ್ದಿಮೆಯ ಸಿ.ಎಸ್.ಆರ್. ಅಡಿಯಲ್ಲಿ ತೆಗೆದುಕೊಂಡಿರುವ ವಿವಿಧ ಚಟುವಟಿಕೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು.

ಸಭೆಯ ಅಧ್ಯಕ್ಷರು ಈ ಉದ್ದೇಶಿತ ಯೋಜನೆಯ ಬಗ್ಗೆ ಪರಿಸರ ಕುರಿತಾಗಿ ಯಾವುದೇಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳು ಯಾವುದಾದರೂ ಇದ್ದಲ್ಲಿ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಕೋರಿದರು.

ಆಮೇರೆಗೆ ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1. **ಶ್ರೀ ಕೆ. ಜಮೀರ್‌ಸಾಬ್ ಕರಾವೇ ಅಧ್ಯಕ್ಷರು ಕುಡತಿನಿ–** ರವರು ಮಾತನಾಡುತ್ತಾ, ಸುತ್ತಮುತ್ತಲಿನ ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಿದೆ ಎಂದು ದೂರು ನೀಡಿದಾಗ ಕೆಲವು ದಿನಗಳ ವರೆಗೆ ಮಾತ್ರ ಧೂಳಿನ ಪ್ರಮಾಣ ಕಡಿಮೆಯಾಗಿದೆ ನಂತರ ಯಥಾಸ್ಥಿತಿ ಮುಂದುವರೆದಿದೆ ಎಂದರು. ಅನೇಕ ರೀತಿಯ ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿರುವುದಾಗಿ ತಿಳಿಸಿದರು. ಕಾರ್ಖಾನೆಗಳು ಬೇಕು ಆರೋಗ್ಯವು ಬೇಕು ಎಂದರು ಪರಿಸರ ಕಾಪಾಡುವ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರು. ಕಾರ್ಖಾನೆಯವರು ಹೇಳಿದಂತೆ ನಡೆದುಕೊಳ್ಳುತ್ತಾರೆ ಎಂಬುದರ ಬಗ್ಗೆ ಭರವಸೆ ಇಲ್ಲ ಎಂದು ತಿಳಿಸಿದರು. ಅಕ್ಕ ಪಕ್ಕದ ಗಿಡ ಮರಳಗ ಮೇಲೆ ಬಿದ್ದಿರುವ ಧೂಳನ್ನು ಗಮನಿಸುವಂತೆ ತಿಳಿಸಿದರು. ಪರಿಸರವನ್ನು ಮೊದಲು ಕಾಪಾಡಿ ನಂತರ ಕಾರ್ಖಾನೆ ಸ್ಥಾಪಿಸುವಂತೆ ಮನವಿ ಮಾಡಿದರು. ಕಾರ್ಖಾನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ನಂತರ ಕಾರ್ಖಾನೆ ಸ್ಥಾಪಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವಂತೆ ತಿಳಿಸಿದರು. ಕಾರ್ಖಾನೆ ಸ್ಥಾಪಿಸುವುದರ ಬಗ್ಗೆ ವಿರೋಧ ವ್ಯಕ್ತಪಡಿಸಿದರು.
2. **ಶ್ರೀ ಗಂಗಾಧರ ಗ್ರಾಮ ಪಂಚಾಯತಿ ಸದಸ್ಯರು ಹರಗಿನದೋಣಿ ಗ್ರಾಮ–** ರವರು ಮಾತನಾಡುತ್ತಾ, ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ನೀಡುವಂತೆ ಕೋರಿದರು. ನಿಯಮಗಳಿಗೆ ಅನುಸಾರವಾಗಿ ಕಾರ್ಖಾನೆಯ ಸುತ್ತಮುತ್ತಲಿನ ಪರಿಸರವನ್ನು ಕಾಪಾಡುವಂತೆ ಮನವಿ ಮಾಡಿದರು. ಕಾರ್ಖಾನೆ ಪ್ರಾರಂಭವಾಗುವುದರಿಂದ ಅನುಕೂಲಗಳಿವೆ ಆದರೆ ನಿಯಮಗಳನ್ನು ಪಾಲಿಸಿ ಕಾರ್ಖಾನೆ ಸ್ಥಾಪಿಸುವಂತೆ ಉದ್ದಿಮೆಯವರಿಗೆ ತಿಳಿಸಿದರು.

3. **ಶ್ರೀ ಲೋಕೇಶ್ ಕುಡಿತಿನಿ ಗ್ರಾಮ ಜೈ ಕರ್ನಾಟಕ ಸಂಘದ ತಾಲ್ಲೂಕು ಅಧ್ಯಕ್ಷರು**-ರವರು ಮಾತನಾಡುತ್ತಾ, ಸದರಿ ಕಾರ್ಖಾನೆಯಿಂದ ಸ್ಥಳೀಯರಿಗೆ ಉದ್ಯೋಗಗಳು ದೊರಕಿವೆ ಎಂದು ತಿಳಿಸಿದರು. ಕಾರ್ಖಾನೆ ಬೆಳೆಯುವುದರಿಂದ ಸುತ್ತಮುತ್ತಲಿನ ಗ್ರಾಮಗಳ ಕೂಲಿ ಕಾರ್ಮಿಕರಿಗೆ, ಲಾರಿ, ಜೆಸಿಬಿ ವಾಹನಗಳನ್ನು ಹೊಂದಿರುವವರಿಗೆ ಕೆಲಸ ಸಿಗುತ್ತದೆ ಎಂದು ಅಭಿಪ್ರಾಯ ಪಟ್ಟರು. ಕಾರ್ಖಾನೆಯವರು ಈಗಾಗಲೇ ಸ್ಥಳೀಯರಿಗೆ ಉದ್ಯೋಗ ನೀಡಿದ್ದು ಮುಂದೆಯು ಸಹ ಸ್ಥಳೀಯರಿಗೆ ಹೆಚ್ಚಿನ ಮಟ್ಟದಲ್ಲಿ ಉದ್ಯೋಗ ನೀಡುತ್ತಾರೆ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದರು. ಕಾರ್ಖಾನೆ ಸ್ಥಾಪಿಸಲು ತಮ್ಮ ಬೆಂಬಲ ಇರುವುದಾಗಿ ತಿಳಿಸಿದರು.

4. **ಶ್ರೀ ದೊಡ್ಡ ಬಸವನಗೌಡ, ಹರಗಿನದೋಣಿ ಗ್ರಾಮ**-ರವರು ಮಾತನಾಡುತ್ತಾ, 2013 ರಿಂದ ಮಾಲಿನ್ಯ ನಿಯಂತ್ರಣ ಮಂಡಳಿಗೆ ಮನವಿಯನ್ನು ಸಲ್ಲಿಸುತ್ತಾ ಬಂದಿರುವುದಾಗಿ ತಿಳಿಸಿದರು. ಕಾರ್ಖಾನೆ ಬಿಡುವ ಧೂಳು ಮತ್ತು ಹೊಗೆಯಿಂದ ಶ್ವಾಶಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳು ಬರುತ್ತವೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ 2013 ರಲ್ಲಿ ವರದಿಯನ್ನು ನೀಡಿರುವುದಾಗಿ ಸಭೆಯ ಗಮನಕ್ಕೆ ತಂದರು. ಕಾರ್ಖಾನೆ ಪ್ರಾರಂಭವಾಗುವುದರಿಂದ ಉಂಟಾಗುವ ಕಪ್ಪು ಧೂಳು ಸುಮಾರು 2 ಕಿ.ಮೀ. ವರೆಗೆ ಹರಡುತ್ತದೆ ಎಂದು ತಿಳಿಸಿದರು. ಕಾರ್ಖಾನೆ ಪ್ರಾರಂಭವಾಗುವ ಸಮಯದಲ್ಲಿ ನೀಡಿರುವ ಷರತ್ತುಗಳನ್ನು ಉದ್ದಿಮೆಯವರು ಪಾಲನೆ ಮಾಡಿದ್ದಾರೋ ಇಲ್ಲವೋ ಎಂಬುದನ್ನು ಕೂಲಂಕುಶವಾಗಿ ಪರಿಶೀಲಿಸಿವಂತೆ ಅಧಿಕಾರಿಗಳಿಗೆ ಮನವಿ ಮಾಡಿದರು. ಗ್ರಾಮಗಳ ಆರೋಗ್ಯ, ಸ್ವಚ್ಚತೆ ಮತ್ತು ರೈತರ ಜಮೀನುಗಳನ್ನು ರಕ್ಷಿಸುವಂತೆ ಕೋರಿದರು. ಸ್ಪಾಂಜ್ ಐರನ್ ಉದ್ದಿಮೆಗಳು ಹೊರ ಸೂಸುವ ಕಪ್ಪು ಧೂಳನ್ನು ನಿಯಂತ್ರಿಸುವಲ್ಲಿ ಇಲಾಖೆ ವಿಫಲವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಕಾರ್ಖಾನೆಯವರು ಸೂಕ್ತ ರೀತಿಯಲ್ಲಿ ಮಾಲಿನ್ಯವನ್ನು ನಿಯಂತ್ರಿಸಲು ಕ್ರಮ ಕೈಗೊಂಡ ನಂತರ ಸಾರ್ವಜನಿಕರ ಅಭಿಪ್ರಾಯವನ್ನು ಪಡೆದು ಕಾರ್ಖಾನೆ ಪ್ರಾರಂಭಿಸಲು ಅನುಮತಿ ನೀಡುವಂತೆ ಮನವಿ ಮಾಡಿದರು.

5. **ಶ್ರೀ ಕೆ ರಾಜು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷರು ಸಂಡೂರು**-ರವರು ಮಾತನಾಡುತ್ತಾ, ಸ್ಥಳೀಯವಾಗಿ ಕಾರ್ಖಾನೆ ಸ್ಥಾಪಿಸಲು ವಿರೋಧವಿಲ್ಲ ಆದರೆ ಸ್ಥಳೀಯರಿಗೆ ಮೂಲಭೂತ ಸೌಕರ್ಯಗಳನ್ನು ಕಾರ್ಖಾನೆಯವರು ಒದಗಿಸಬೇಕು ಎಂದು ತಿಳಿಸಿದರು. ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಕಾರ್ಖಾನೆಯಿಂದ ಉಂಟಾಗುವ ಮಾಲಿನ್ಯವನ್ನು ನಿಯಂತ್ರಿಸಿ ಅವರ ಆರೋಗ್ಯದ ಕಾಳಜಿ ವಹಿಸುವಂತೆ ಕಾರ್ಖಾನೆಯವರಿಗೆ ತಿಳಿಸಿದರು. ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ಕೂಲಿ ಕಾರ್ಮಿಕರಿಗೆ, ವಿದ್ಯಾವಂತ ಯುವಕರಿಗೆ, ಲಾರಿ ಮಾಲೀಕರಿಗೆ ಮತ್ತು ರೈತರಿಗೆ ಅನುಕೂಲವನ್ನು ಮಾಡಿಕೊಡುವಂತೆ ಮನವಿ ಮಾಡಿದರು. ಭೂಮಿಯನ್ನು ಕಳೆದು ಕೊಂಡವರಿಗೆ ಉದ್ಯೋಗ ನೀಡುವಂತೆ ತಿಳಿಸಿದರು. ಸದರಿ ಯೋಜನೆಯನ್ನು ಪ್ರಾರಂಭಿಸಲು ತಮ್ಮ ಸಹಮತ ವ್ಯಕ್ತಪಡಿಸಿದರು.

6. **ಶ್ರೀ ಎಮ್. ಸತೀಶ್, ಬಳ್ಳಾರಿ ಜಿಲ್ಲೆ ಪರಿಸರ ಸಂರಕ್ಷಣಾ ವೇದಿಕೆ ಅಧ್ಯಕ್ಷರು** -ರವರು ಮಾತನಾಡುತ್ತಾ, ಕಳೆದು 30 ವರ್ಷಗಳಿಂದ ಬಳ್ಳಾರಿ ಜಿಲ್ಲೆಯಲ್ಲಿ ಕಾರ್ಖಾನೆಗಳು ಮೈನಿಂಗ್ ಕಂಪನಿಗಳು ಸ್ಥಾಪನೆಯಾಗಿರುವುದರಿಂದ ಸುತ್ತಮುತ್ತಲಿನ ಗ್ರಾಮಗಳ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಔದ್ಯೋಗಿಕವಾಗಿ ಅಭಿವೃದ್ದಿಯಾಗುತ್ತಿವೆ ಎಂದು ತಿಳಿಸಿದರು. ಮಾಲಿನ್ಯದಿಂದ ಅತಿರಿಕ್ತವಾದ ಪರಿಸ್ಥಿತಿ

ನಿರ್ಮಾಣವಾಗುತ್ತಿದ್ದು ಅದನ್ನು ನಿಯಂತ್ರಿಸುವಂತೆ ತಿಳಿಸಿದರು. ಕಾರ್ಖಾನೆಯವರು ಹಾರೂಬೂದಿಯನ್ನು ನಿಯಂತ್ರಿಸಲು, ಕಪ್ಪು ಹೊಗೆ ಹೊರಸೂಸುವಿಕೆಯನ್ನು ತಡೆಯಲು ಆಧುನಿಕವಾದ ಯಂತ್ರೋಪಕರಣಗಳನ್ನು ಅಳವಡಿಸುವಂತೆ ಕಾರ್ಖಾನೆಯವರಿಗೆ ತಿಳಿಸಿದರು. ಸದರಿ ಕಾರ್ಖಾನೆಯಿಂದ ಉತ್ಪತ್ತಿಯಾಗುವ ವಿದ್ಯುತ್‌ನ್ನು ಸುತ್ತಮುತ್ತಲಿನ ಗ್ರಾಮಗಳಿಗೆ ಉಚಿತವಾಗಿ ನೀಡುವಂತೆ ಮನವಿ ಮಾಡಿದರು. ಪರಿಸರ ಸಂರಕ್ಷಣೆಗೆ ಮೀಸಲಿರಿಸಿರುವ ಹಣವನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುವಂತೆ ಅಂತರ್ಜಲ ಗುಣಮಟ್ಟವನ್ನು ಕಾಪಾಡುವಂತೆ ಪರಿಸರ ಮಾಲಿನ್ಯವನ್ನು ನಿಯಂತ್ರಿಸುವಂತೆ ತಿಳಿಸಿದರು. ಸದರಿ ಯೋಜನೆಗೆ ತಮ್ಮ ಸಹಮತವನ್ನು ವ್ಯಕ್ತಪಡಿಸಿದರು.

7. **ಶ್ರೀ ಸತ್ಯನಾರಾಯಣ ರೆಡ್ಡಿ ಪರಿಸರವಾದಿ ಬಳ್ಳಾರಿ** –ರವರು ಮಾತನಾಡುತ್ತಾ, ಪರಿಸರವನ್ನು ಕಾಪಾಡುವ ಕೆಲಸ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯದ್ದು ಎಂದು ತಿಳಿಸಿದರು. ಸ್ಥಳೀಯರಿಗೆ, ಕೂಲಿ ಕಾರ್ಮಿಕರಿಗೆ ವಿಶೇಷವಾಗಿ ಕಟ್ಟಡ ಕಾರ್ಮಿಕರಿಗೆ ಕಾರ್ಖಾನೆಯಲ್ಲಿ ಉದ್ಯೋಗ ನೀಡುವಂತೆ ಮನವಿ ಮಾಡಿದರು. ಸ್ಥಳೀಯರಿಗೆ ಉದ್ಯೋಗದಲ್ಲಿ ಹೆಚ್ಚಿನ ಆದ್ಯತೆ ನೀಡುವಂತೆ ತಿಳಿಸಿ ಕಾರ್ಖಾನೆ ಸ್ಥಾಪಿಸಲು ತಮ್ಮ ಬೆಂಬಲವನ್ನು ಸೂಚಿಸಿದರು.

8. **ಶ್ರೀಮತಿ ಮಂಜುಳ, ಸಾಮಾಜಿಕ ಕಾರ್ಯಕರ್ತೆ ಚಿತ್ರದುರ್ಗ**–ರವರು ಮಾತನಾಡುತ್ತಾ, ಅಗರ್‌ವಾಲ್ ಸ್ಪಾಂಜ್ ಕಾರ್ಖಾನೆಯವರಿಗೆ ಶುಭ ಆರೈಸುವುದಾಗಿ ತಿಳಿಸಿದರು. ಸ್ಥಳೀಯರಿಗೆ ಧೂಳಿನಿಂದ ಸಾಕಷ್ಟು ತೊಂದರೆಗಳಾಗಿದ್ದು ಅದ್ನು ನಿವಾರಿಸುವಂತೆ ತಿಳಿಸಿದರು. ಕಾರ್ಖಾನೆಗಳು ಪ್ರಾರಂಭವಾಗುವುದರಿಂದ ಸ್ಥಳೀಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಗಳು ಸಿಗುತ್ತವೆ ಎಂದು ಅಭಿಪ್ರಾಯ ಪಟ್ಟರು. ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಕಾರ್ಖಾನೆಯನ್ನು ಸ್ಥಾಪಿಸುವಂತೆ, ಸ್ಥಳೀಯರಿಗೆ ಆದ್ಯತೆ ಮೇರೆಗೆ ಉದ್ಯೋಗ ನೀಡುವಂತೆ ಮತ್ತು ಸುತ್ತಮುತ್ತಲಿನ ಪರಿಸರವನ್ನು ಕಾಪಾಡುವಂತೆ ಮನವಿ ಮಾಡಿದರು.

9. **ಶ್ರೀ ರುದ್ರ, ಹರಗಿನದೋಣಿ ಗ್ರಾಮ**–ರವರು ಮಾತನಾಡುತ್ತಾ, ತಮಗೆ ಉದ್ಯೋಗದ ಅವಶ್ಯಕತೆ ಇದ್ದು ಕಾರ್ಖಾನೆ ಪ್ರಾರಂಭವಾದರೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ಪಟ್ಟರು.

10. **ಶ್ರೀ ರಾಜು ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷರು ಬಳ್ಳಾರಿ**–ರವರು ಮಾತನಾಡುತ್ತಾ, ಕಾರ್ಖಾನೆ ಸ್ಥಾಪಿಸುವದರಿಂದ ತೊಂದರೆ ಇಲ್ಲ ಅನುಮತಿಯನ್ನು ನೀಡಬಹುದು ಎಂದು ಅಭಿಪ್ರಾಯ ತಿಳಿಸಿದರು.

11. **ಶ್ರೀ ತಿಪ್ಪೆಸ್ವಾಮಿ ಹರಗಿನದೋಣಿ ಗ್ರಾಮ**–ರವರು ಮಾತನಾಡುತ್ತಾ, ಕಾರ್ಖಾನೆ ಸ್ಥಾಪಿಸುವುದರಿಂದ ತೊಂದರೆ ಇಲ್ಲ ಎಂದು ತಿಳಿಸಿ ಕಾರ್ಖಾನೆಯಲ್ಲಿ ಕೆಲಸ ನೀಡುವಂತೆ ಮನವಿ ಮಾಡಿದರು.

12. **ಶ್ರೀ ಪಂಪಾಪತಿ ಹರಗಿನದೋಣಿ ಗ್ರಾಮ**–ರವರು ಮಾತನಾಡುತ್ತಾ, ಕಾರ್ಖಾನೆ ಸ್ಥಾಪಿಸವುದರಿಂದ ತೊಂದರೆ ಇಲ್ಲ ಎಂದು ತಿಳಿಸಿ ಕಾರ್ಖಾನೆಯಲ್ಲಿ ಕೆಲಸ ನೀಡುವಂತೆ ಮನವಿ ಮಾಡಿದರು.

13. **ಶ್ರೀ ಬಿ.ವಿ.ರೆಡ್ಡಿ ಪರಿಸರವಾದಿಗಳು**–ರವರು ಮಾತನಾಡುತ್ತಾ, ಉದ್ದಿಮೆ ನಡೆಸುವುದರಿಂದ ಉಂಟಾಗುವ ತೊಂದರೆ/ಸಮಸ್ಯೆ ಗಳನ್ನು ಬಗೆಹರಿಸಲು ಉದ್ದಿಮೆ ಮಾಲೀಕರು, ಸ್ಥಳೀಯ ಮುಖಂಡರನ್ನೊಳಗೊಂಡ ಸಮನ್ವಯ ಸಮಿತಿಯನ್ನು ರಚಿಸಿ ಸಿ.ಎಸ್.ಆರ್. ಅನುಧಾನವನ್ನು ಬಳಸಿಕೊಂಡು ಸ್ಥಳೀಯ

ಗ್ರಾಮಗಳನ್ನು ಅಭಿವೃದ್ಧಿ ಪಡಿಸುವಂತೆ ಸಲಹೆ ನೀಡಿದರು. ಉದ್ದಿಮೆ ಸ್ಥಾಪನೆಯಿಂದ ಸ್ಥಳೀಯರಿಗೆ ಉದ್ಯೋಗ ಸಿಗುತ್ತದೆ ಎಂದು ಯೋಜನೆಯನ್ನು ಸ್ವಾಗತಿಸಿದರು.

14. **ಶ್ರೀ ಸುನಂದಾ ರೆಡ್ಡಿ ಪರಿಸರ ತಜ್ಞ**– ರವರು ಮಾತನಾಡುತ್ತಾ, ಕಂಪನಿಯ ಪರವಾಗಿ ಕುರಿತು ತಳ ಮಟ್ಟದಿಂದ ಗಾಳಿ ನೀರು ಮಣ್ಣಿನ ಕುರಿತು, ಸರ್ವೆ ಮಾಡಿ ಯೋಜನೆಯನ್ನು ಸಿದ್ದಪಡಿಸಿದ ಕನ್ಸಲ್ಟೆಂಟ್‌ರವರನ್ನು ಅಭಿನಂದಿಸುವುದಾಗಿ ತಿಳಿಸಿದರು. ಮುಂದಿನ ದಿನಗಳಲ್ಲಿ ಯೋಜನಾ ವರದಿ ಸಿದ್ದಪಡಿಸುವಾಗ ಸಾಧ್ಯವಾದರೆ ಸ್ಥಳೀಯವಾಗಿ 10 ಕಿ.ಮೀ. ವ್ಯಾಪ್ತಿಯಲ್ಲಿ ಸ್ಥಳೀಯರ ಆರೋಗ್ಯದ ಗುಣಮಟ್ಟದ ವರದಿ ಕೃಷಿ ಬೆಳೆಗಳ ಇಳುವರಿಯ ಬಗ್ಗೆ ಮಾಹಿತಿ ಮತ್ತು ಅಂತರ್ಜಲ ಗುಣಮಟ್ಟದ ಬಗ್ಗೆ ಮಾಹಿತಿಯನ್ನು ಕಲೆ ಹಾಕುವಂತೆ ಸಲಹೆ ನೀಡಿದರು. ಸದರಿ ವಿಷಯಗಳು ಅತಿ ಮುಖ್ಯವಾಗಿದ್ದು ಅವುಗಳನ್ನು ತಮ್ಮ ಯೋಜನೆಯನ್ನು ಪ್ರಸ್ಥಾವನೆ ಮಾಡುವಾಗ ಪರಿಗಣಿಸುವಂತೆ ಕೋರಿದರು. ಔಷಧೀಯ ಸಸ್ಯಗಳನ್ನು ಬೆಳೆಸುವಂತೆ, ಮಳೆ ನೀರು ಕೊಯ್ಲು ಪದ್ಧತಿಯನ್ನು ಜಾರಿಗೆ ತರುವಂತೆ ಸಲಹೆ ನೀಡಿದರು. ಉದ್ದಿಮೆ ಮಾಲೀಕರು, ಸ್ಥಳೀಯ ಮುಖಂಡರನ್ನೊಳಗೊಂಡ ಸಮನ್ವಯ ಸಮಿತಿಯನ್ನು ರಚಿಸಿ ಸಿ.ಎಸ್.ಆರ್. ಅನುಧಾನವನ್ನು ಬಳಸಿಕೊಂಡು ಸ್ಥಳೀಯ ಗ್ರಾಮಗಳನ್ನು ಅಭಿವೃದ್ಧಿ ಪಡಿಸುವಂತೆ ತಿಳಿಸಿದರು. ಸದರಿ ಯೋಜನೆಯ ಸ್ಥಾಪನೆಗೆ ಅನುಮತಿ ನೀಡುವಂತೆ ಮನವಿ ಮಾಡಿದರು.

15. **ಶ್ರೀ ಬಿ.ವೆಂಕಟೇಶುಲು, ಸಾಮಾಜಿಕ ಸೇವಾಕಾರ್ಯಕರ್ತ**–ರವರು ಮಾತನಾಡುತ್ತಾ, ಕಾರ್ಖಾನೆ ಪ್ರಾರಂಭವಾಗುವುದರಿಂದ, ಸ್ಥಳೀಯರಿಗೆ ಉದ್ಯೋಗಗಳು ದೊರಕುತ್ತವೆ ಎಂದು ತಿಳಿಸಿ ಉದ್ದಿಮೆಯ ಪರವಾಗಿ ಬೆಂಬಲ ವ್ಯಕ್ತಪಡಿಸಿದರು.

16. **ಶ್ರೀ ಮಹೇಶ್ ವೇಣಿವೀರಾಪುರ ಗ್ರಾಮ** –ರವರು ಮಾತನಾಡುತ್ತಾ, ಕಾರ್ಖಾನೆ ಸ್ಥಾಪಿಸಲು ಅಭ್ಯಂತರವಿಲ್ಲ ಆದರೆ ತಮ್ಮ ಗ್ರಾಮಕ್ಕೆ ಆಸ್ಪತ್ರೆ ಇಲ್ಲ ಕಾರ್ಖಾನೆ ವತಿಯಿಂದ ಆಸ್ಪತ್ರೆಯನ್ನು ಪ್ರಾರಂಭಿಸುವಂತೆ ಮನವಿ ಮಾಡಿದರು. ಸದರಿ ಕಾರ್ಖಾನೆಯಲ್ಲಿ ಮಹಿಳೆಯರಿಗೆ ಉದ್ಯೋಗ ನೀಡುವಂತೆ ಮನವಿ ಮಾಡಿದರು.

17. **ಶ್ರೀ ಶೇಖರ್ ಹರಗಿನದೋಣಿ ಗ್ರಾಮ**–ರವರು ಮಾತನಾಡುತ್ತಾ, ಕಾರ್ಖಾನೆಯಲ್ಲಿ ಹೊರರಾಜ್ಯದವರಿಗೆ ಉದ್ಯೋಗ ನೀಡಿದ್ದಾರೆ ತಮ್ಮನ್ನು ಕಾರ್ಖಾನೆಯಿಂದ ಹೊರಗೆ ಕಳುಹಿಸಿದ್ದಾರೆ ಅದನ್ನು ಕೂಡಲೇ ನಿಲ್ಲಿಸಿ ಸ್ಥಳೀಯರಿಗೆ ಉದ್ಯೋಗ ನೀಡುವಂತೆ ಮನವಿ ಮಾಡಿದರು, ಸ್ಥಳಿಯರಿಗೆ ಉದ್ಯೋಗ ನೀಡದಿದ್ದಲ್ಲಿ ಉದ್ದಿಮೆಯವರಿಗೆ ತೊಂದರೆಯಾಗುತ್ತದೆ ಅದಕ್ಕೆ ಆಸ್ಪದ ನೀಡದೇ ಸ್ಥಳೀಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ನೀಡಿ ಅನುಕೂಲ ಮಾಡಿಕೊಡುವಂತೆ ಮನವಿ ಮಾಡಿದರು.

18. **ಶ್ರೀ ಮಾಂತರೆಡ್ಡಿ ವೇಣಿ ವೀರಾಪುರ ಗ್ರಾಮ**–ರವರು ಮಾತನಾಡುತ್ತಾ, ಕಾರ್ಖಾನೆ ಸ್ಥಾಪಿಸಲು ನಮ್ಮ ಅಭ್ಯಂತರವಿಲ್ಲ ಎಂದು ತಿಳಿಸಿದರು. ಕಾರ್ಖಾನೆಯವರು ಈಗಾಗಲೇ ಸ್ಥಳಿಯರಿಗೆ ಉದ್ಯೋಗ ನೀಡಿದ್ದು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಗಳನ್ನು ಸುತ್ತಮುತ್ತಲ ಗ್ರಾಮಗಳ ಸಾರ್ವಜನಿಕರಿಗೆ ನೀಡುವಂತೆ ಮನವಿ ಮಾಡಿದರು.

19. **ಶ್ರೀ ಭರಮಪ್ಪ ಜಾನೆಕುಂಟೆ ಗ್ರಾಮ**–ರವರು ಮಾತನಾಡುತ್ತಾ ಕಾರ್ಖನೆಯಿಂದ ಸ್ಥಳೀಯರು ಜೀವನ ನಡೆಸುತ್ತಿದ್ದು, ಕಾರ್ಖಾನೆ ಸ್ಥಾಪಿಸಬೇಕು ಎಂದು ಮನವಿ ಮಾಡಿದರು.

20. **ಶ್ರೀ ಎಂ ಆನಂದ್, ವೇಣಿವೀರಾಪುರ ಗ್ರಾಮ**- ರವರು ಮಾತನಾಡುತ್ತಾ ಕಾರ್ಖಾನೆ ಸ್ಥಾಪಿಸುವುದರಿಂದ ತೊಂದರೆ ಇಲ್ಲ ಕಾರ್ಖಾನೆ ಸ್ಥಾಪಿಸಿದ ನಂತರ ಉದ್ಯೋಗ ನೀಡದಿದ್ದರೂ ಪರವಾಗಿಲ್ಲ ಆದರೆ ಸುತ್ತಮುತ್ತಲಿನ ಗ್ರಾಮಗಳ ನಿವಾಸಿಗಳಿಗೆ ಆರೋಗ್ಯ ಸಮಸ್ಯೆಯನ್ನು ಉಂಟುಮಾಡದಂತೆ ಕಾರ್ಖಾನೆಯವರಲ್ಲಿ ಮನವಿ ಮಾಡಿದರು. ಪರಿಸರವನ್ನು ಸಂರಕ್ಷಿಸುವ ಕೆಲಸವನ್ನು ಯಾವ ಕಾರ್ಖಾನೆಯವರು ಮಾಡಿಲ್ಲ ಎಂದು ಬೇಸರ ವ್ಯಕ್ತ ಪಡಿಸಿದರು. ಪರಿಸರ ಚೆನ್ನಗಿದ್ದರೆ, ಆರೋಗ್ಯ ಚೆನ್ನಾಗಿರುತ್ತದೆ. ಆದುದರಿಂದ ಪರಿಸರವನ್ನು ಹಾಳು ಮಾಡುವಂತಹ ವ್ಯವಸ್ಥೆಯನ್ನು ಮೊದಲು ಸರಿಪಡಿಸುವಂತೆ ತಿಳಿಸಿದರು. ಕಾರ್ಖಾನೆ ಸ್ಥಾಪಿಸಿದ ನಂತರ ಸ್ಥಳೀಯರಿಗೆ ಶೇಕಡಾ 90% ಉದ್ಯೋಗಗಳನ್ನು ನೀಡುವಂತೆ ಮನವಿ ಮಾಡಿದರು. ಸ್ಥಳೀಯರಿಗೆ ಅದ್ಯತೆ ಮೇರೆಗೆ ಉದ್ಯೋಗ ನೀಡುವಂತೆ, ಜನರ ಆರೋಗ್ಯವನ್ನು ಕಾಪಾಡಲು ಕ್ರಮ ಕೈಗೊಳ್ಳುವಂತೆ ಕಾರ್ಖಾನೆಯವರಿಗೆ ಸೂಚನೆ ನೀಡಿ ಪರಿಸ್ಥಿತಿಯನ್ನು ಆಳವಾಗಿ ಅದ್ಯಯನ ನಡೆಸಿದ ನಂತರ ಕಾರ್ಖಾನೆ ಪ್ರಾರಂಭಿಸಲು ಅನುಮತಿ ನೀಡುವಂತೆ ಮನವಿ ಮಾಡಿದರು.

21. **ಶ್ರೀಮತಿ ಗೀತಾ ಬಳ್ಳಾರಿ**-ರವರು ಮಾತನಾಡುತ್ತಾ, ಅಗರ್‌ವಾಲ್ ಕಾರ್ಖಾನೆಯನ್ನು ಪ್ರಾರಂಭಿಸುವುದರಿಂದ ಅನುಕೂಲ ಇದೆ ಎಂದು ತಿಳಿಸಿದರು. ಸ್ಥಳೀಯರಿಗೆ ಆದ್ಯತೆಯಲ್ಲಿ ಉದ್ಯೋಗ ನೀಡುವಂತೆ ಮನವಿ ಮಾಡಿದರು.

22. **ಶ್ರೀ ಸುದರ್ಶನ್ ಹೈದರಾಬಾದ್**-ರವರು ಮಾತನಾಡುತ್ತಾ, ಪರಿಸರಕ್ಕೆ ಹಾನಿಯಾಗದಂತೆ ಕಾರ್ಯ ನಿರ್ವಹಿಸಬೇಕು, ಸ್ಥಳೀಯರಿಗೆ ಉದ್ಯೋಗ ನೀಡಬೇಕು ಎಂದು ತಿಳಿಸಿದರು. ಕಾರ್ಖಾನೆಯಲ್ಲಿ ಬಾಲಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿ ಕೊಳ್ಳದಂತೆ ಮನವಿ ಮಾಡಿದರು. ಸಿ.ಎಸ್.ಆರ್. ಅನುಧಾನವನ್ನು ಸ್ಥಳೀಯ ಗ್ರಾಮಗಳ ಅಭಿವೃದ್ದಿಗೆ ಬಳಸಿಕೊಳ್ಳುವಂತೆ ಕಾರ್ಖಾನೆಯವರಿಗೆ ಮನವಿ ಮಾಡಿದರು.

23. **ಶ್ರೀ ಅರುಣ್ ಕುಮಾರ್, ಹರಗಿನದೋಣಿ ಗ್ರಾಮ**-ರವರು ಮಾತನಾಡುತ್ತಾ, ತಮಗೆ ಉದ್ಯೋಗದ ಅವಶ್ಯಕತೆ ಇದ್ದು ಕೆಲಸ ನೀಡುವಂತೆ ಮನವಿ ಮಾಡಿದರು.

24. **ಶ್ರೀ ಆರ್. ಶಿವರಾಮರೆಡ್ಡಿ ಬೆಳಗಲ್ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷರು**-ರವರು ಮಾತನಾಡತ್ತಾ, ಅಗರ್‌ವಾಲ್ ಕಾರ್ಖಾನೆಯನ್ನು ವಿಸ್ತರಣೆ ಮಾಡಲು ತಮ್ಮ ಅಭ್ಯಂತರವಿಲ್ಲ ಎಂದು ತಿಳಿಸಿದರು. 33% ಅರಣ್ಯೀಕರಣವನ್ನು ಕಾರ್ಖಾನೆಯವರು ಬೆಳೆಸುವಂತೆ ತಿಳಿಸಿದರು. ಸಾರ್ವಜನಿಕರ ಆರೋಗ್ಯದ ಬಗ್ಗೆ ಗಮನ ಹರಿಸುವಂತೆ ತಿಳಿಸಿದರು. ಕಾರ್ಖಾನೆ ಸ್ಥಾಪಿಸಲು ಅನುಮತಿ ನೀಡಬಹುದು ಎಂದು ಅಭಿಪ್ರಾಯ ಪಟ್ಟರು.

25. **ಶ್ರೀ ರಾಜಣ್ಣ ಹರಗಿನದೋಣಿ ಗ್ರಾಮ**-ರವರು ಮಾತನಾಡುತ್ತಾ, ಕಾರ್ಖಾನೆ ಸ್ಥಾಪಿಸಲು ಅಭ್ಯಂತರವಿಲ್ಲ ಕಾರ್ಖಾನೆಯನ್ನು ಸ್ಥಾಪಿಸಲು ಅನುಮತಿ ನೀಡಬಹುದಾಗಿದೆ ಎಂದು ತಿಳಿಸಿದರು.

26. **ಶ್ರೀ ಹೆಚ್. ಮಂಜುನಾಥ್ ಹರಗಿನದೋಣಿ ಗ್ರಾಮ**-ರವರು ಮಾತನಾಡುತ್ತಾ, ಅಗರ್‌ವಾಲ್ ಸ್ಪಾಂಜ್ ಕಾರ್ಖಾನೆ ಸ್ಥಾಪಿಸುವುದರಿಂದ ಉದ್ಯೋಗಗಳು ಸೃಷ್ಠಿಯಾಗುತ್ತದೆ ಇದರಿಂದ ಯಾವುದೇ ರೀತಿಯ ತೊಂದರೆ ಇಲ್ಲ ಕಾರ್ಖಾನೆ ಹರಗಿನದೋಣಿ ಗ್ರಾಮಸ್ಥರಿಂದ ಸಹಮತ ಇದೆ ಎಂದು ತಿಳಿಸಿದರು.

27. **ಶ್ರೀ ಆಂಜೇನಯ ನಾಗೇನಹಳ್ಳಿ ರಾಣಿಬೆನ್ನೂರು**– ಅಗರ್‌ವಾಲ್ ಸ್ಪಾಂಜ್ ಐರನ್ ಉದ್ದಿಮೆಯ ಹೆಚ್ಚಿನ ಉತ್ಪಾದನೆಯ ಕುರಿತಂತೆ ಲಿಖಿತ ರೂಪದಲ್ಲಿ ಬೆಂಬಲವನ್ನು ಸಲ್ಲಿಸುವುದಾಗಿ ತಿಳಿಸಿದರು.

28. **ಶ್ರೀ ಲಕ್ಷಣ ಹರಗಿನದೋಣಿ ಗ್ರಾಮ**– ಕಾರ್ಖಾನೆ ಬೇಕು ಎಂದು ತಿಳಿಸಿದರು.

29. **ಶ್ರೀ ಆದಿಮೂರ್ತಿ ವೇಣಿವೀರಾಪುರ ಗ್ರಾಮ**–ರವರು ಮಾತನಾಡುತ್ತಾ, ತಮ್ಮ ಗ್ರಾಮದವರನ್ನು ಕೆಲಸದಿಂದ ತೆಗೆದು ಹಾಕಿದ್ದು ತಮ್ಮ ಗ್ರಾಮದವರಿಗೆ ಉದ್ಯೋಗಕ್ಕೆ ಪರಿಗಣಿಸಿರುವುದಿಲ್ಲ ಎಂದು ತಿಳಿಸಿದರು. ಕಾರ್ಖಾನೆ ಪ್ರಾರಂಭಿಸಲು ಅಭ್ಯಂತರವಿಲ್ಲ ಸ್ಥಳೀಯರಿಗೆ ಉದ್ಯೋಗ ನೀಡುವಂತೆ ಪರಿಸರವನ್ನು ಕಾಪಾಡುವಂತೆ ಕಾರ್ಖಾನೆಯವರಲ್ಲಿ ಮನವಿ ಮಾಡಿದರು.

30. **ಶ್ರೀ ಮಂಜು ಕರ್ನಾಟಕ ರಕ್ಷಣಾ ವೇದಿಕೆ ಸಂಘಟನಾ ಕಾರ್ಯದರ್ಶಿ ಕುಡತಿನಿ ಗ್ರಾಮ**–ರವರು ಮಾತನಾಡುತ್ತಾ, ಕಾರ್ಖಾನೆಯಲ್ಲಿ ಸ್ಥಳೀಯರಿಗೆ ಎಷ್ಟು ಪ್ರಮಾಣದಲ್ಲಿ ಉದ್ಯೋಗ ನೀಡುತ್ತಾರೆ ಎಂಬುದರ ಬಗ್ಗೆ ಸ್ಪಷ್ಟನೆ ನೀಡುವಂತೆ ಕೋರಿದರು.

31. **ಶ್ರೀ ಮುಕ್ಕೇಶ್ ಗ್ರಾಮ ಪಂಚಾಯತಿ ಸದಸ್ಯರು ಹರಗಿನದೋಣಿ ಗ್ರಾಮ**–ರವರು ಮಾತನಾಡುತ್ತಾ, ಸುತ್ತಮುತ್ತಲಿನ ಗ್ರಾಮಗಳ ನಿವಾಸಿಗಳಿಗೆ ಸದರಿ ಕಾರ್ಖಾನೆಯಿಂದ ಅನುಕೂವಾಗುವುದಾದರೆ ಕಾರ್ಖಾನೆಯನ್ನು ಸ್ಥಾಪಿಸುವಂತೆ ತಿಳಿಸಿದರು.

32. **ಶ್ರೀ ಸುಧಾಕರ ಹರಗಿನದೋಣಿ ಗ್ರಾಮ**– ರವರು ಮಾತನಾಡುತ್ತಾ, ಕಾರ್ಖಾನೆ ಬೇಕು ಎಂದು ಮನವಿ ಮಾಡಿದರು.

33. **ಶ್ರೀ ದೊಡ್ಡಬಸಪ್ಪ ಗ್ರಾಮ ಪಂಚಾಯತಿ ಸದಸ್ಯರು ಜಾನೆಕುಂಟೆ ಗ್ರಾಮ**– ರವರು ಮಾತನಾಡುತ್ತಾ, ಕಾರ್ಖಾನೆ ಸ್ಥಾಪಿಸುವದರಿಂದ ತೊಂದರೆ ಇಲ್ಲ ಎಂದು ತಿಳಿಸಿದರು. ಸುತ್ತಮುತ್ತಲಿನ ಗ್ರಾಮಗಳ ನಿವಾಸಿಗಳಿಗೆ ಉದ್ಯೋಗ ನೀಡುವಂತೆ ಮನವಿ ಮಾಡಿದರು.

34. **ಶ್ರೀ ಶೇಖರಪ್ಪ ಜಾನೆಕುಂಟೆ ಗ್ರಾಮ**–ರವರು ಮಾತನಾಡುತ್ತಾ, ಕಾರ್ಖಾನೆ ಸ್ಥಾಪಿಸುವದರಿಂದ ಯಾವುದೇ ತೊಂದರೆ ಇಲ್ಲ ಎಂದು ತಿಳಿಸಿದರು. ಕಾರ್ಖಾನೆಯಿಂದ ಹೊರ ಹೊಮ್ಮುವ ಧೂಳನ್ನು ನಿಯಂತ್ರಿಸುವಂತೆ ಸ್ಥಳೀಯರಿಗ ಉದ್ಯೋಗ ನೀಡುವಂತೆ ಮನವಿ ಮಾಡಿದರು.

35. **ಶ್ರೀ ಜಗದೀಶ್ ಗ್ರಾಮ ಪಂಚಾಯತಿ ಸದಸ್ಯರು ವೇಣಿವೀರಾಪುರ**–ರವರು ಮಾತನಾಡುತ್ತಾ, ಗ್ರಾಮಸ್ಥರಿಗೆ ತೊಂದರೆಯಾಗದಂತೆ ಆರೋಗ್ಯದ ಸಮಸ್ಯೆಯಾಗದಂತೆ ಕಾರ್ಖಾನೆ ನಡೆಸುವಂತೆ ಉದ್ದಿಮೆದಾರರಿಗೆ ಸಲಹೆ ನೀಡುವಂತೆ ಅಧಿಕಾರಿಗಳಲ್ಲಿ ಮನವಿ ಮಾಡಿದರು. ಪರಿಸರದ ಬಗ್ಗೆ ಕಾಳಜಿ ವಹಿಸುವಂತೆ ಕೋರಿದರು. ಸಿ.ಎಸ್.ಆರ್. ಅನುಧಾನವನ್ನು ಬಳಸಿ ಸುತ್ತಮುತ್ತಲಿನ ಗ್ರಾಮಗಳನ್ನು ಅಭಿವೃದ್ಧಿ ಪಡಿಸುವಂತೆ ಕೋರಿದರು. 33% ಅರಣ್ಯೀಕರಣಗೊಳಿಸುವ ಕಾರ್ಯಕ್ರಮವನ್ನು ಗಂಭೀರವಾಗಿ ಪರಿಗಣಿಸಿ ಕಾರ್ಖಾನೆಯ ಸುತ್ತಮುತ್ತಲು ಹಸಿರು ಪಟ್ಟಿ ಅಭಿವೃದ್ಧಿ ಪಡಿಸುವಂತೆ ತಿಳಿಸಿದರು. ಶಾಲಾ ಮಕ್ಕಳಿಗೆ ಬಸ್ ವ್ಯವಸ್ಥೆ ಮಾಡುವಂತೆ ತಮ್ಮ ಗ್ರಾಮಕ್ಕೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವಂತೆ ಮನವಿ ಮಾಡಿದರು. ಸ್ಥಳೀಯರಿಗೆ ಆದ್ಯತೆಯಲ್ಲಿ ಕೆಲಸ ನೀಡುವಂತೆ ಕೋರಿದರು. ಸಾರ್ವಜನಿಕ ಸಭೆಯನ್ನು ನೆಪಮಾತ್ರಕ್ಕೆ ನಡೆಸದೆ ಯೋಜನಾ ವರದಿಯಲ್ಲಿ ತಿಳಿಸಿರುವ ನಿಯಂತ್ರಣ ಕ್ರಮಗಳನ್ನು

ಮತ್ತು ಅಭಿವೃದ್ಧಿ ಕಾರ್ಯಗಳನ್ನು ವಾಸ್ತವಾಗಿ ಜಾರಿಗೆ ತರುವಂತೆ ಉದ್ದಿಮೆಯವರಿಗೆ ತಿಳಿಸಿದರು. ಸದರಿ ಯೋಜನೆಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು.

36. **ಶ್ರೀ ಕೆ.ಶಿವರಾಜ ಹರಗಿನದೋಣಿ ಗ್ರಾಮ**– ರವರು ಮಾತನಾಡುತ್ತಾ, ಕಾರ್ಖಾನೆ ಸ್ಥಾಪಿಸುವದರಿಂದ ತೊಂದರೆ ಇಲ್ಲ ಎಂದು ತಿಳಿಸಿದರು. ಸುತ್ತಮುತ್ತಲಿನ ಗ್ರಾಮಗಳ ಸ್ಥಳೀಯ ನಿವಾಸಿಗಳಿಗೆ ಉದ್ಯೋಗ ನೀಡುವಂತೆ ಮನವಿ ಮಾಡಿದರು.

ಕೊನೆಯಲ್ಲಿ ಸಾರ್ವಜನಿಕ ಆಲಿಕೆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರು ತಮ್ಮ ಅಧ್ಯಕ್ಷೀಯ ಮಾತುಗಳನ್ನಾಡುತ್ತ, ಸದರಿ ಸಭೆಯು ಪರಿಸರ ಸಾರ್ವಜನಿಕ ಸಭೆಯಾಗಿದ್ದು, ಇದರಲ್ಲಿ ಎಲ್ಲರಿಗೂ ಮಾತನಾಡಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಹಾಗು ತಾವು ಮಾತನಾಡಿದ ಪರ/ವಿರೋಧ ಅಭಿಪ್ರಾಯಗಳನ್ನ ದಾಖಲಿಸಲಾಗಿದೆ. ಈ ಸಭೆಯಲ್ಲಿ ನಾವುಗಳು ಯಾವುದೇ ತಿರ್ಮಾನ ತೆಗೆದುಕೊಳ್ಳುವದಿಲ್ಲ, ಈ ಸಭೆಯ ಉದ್ದೇಶ ಸಾರ್ವಜನಿಕರ ಅಭಿಪ್ರಾಯ ಹಾಗೂ ಸಲ್ಲಿಸಿರುವ ಮೌಖಿಕ ಮತ್ತು ಲಿಖಿತ ಅಭಿಪ್ರಾಯಗಳನ್ನು ಸಂಗ್ರಹಿಸಿ, ಹಾಗೂ ತಾವುಗಳು ಸಲ್ಲಿಸಿರುವ ಮನವಿಗಳು, ಹೆಚ್ಚಿನ ಸಂಖ್ಯೆಯ ಲಿಖಿತ ಅಭಿಪ್ರಾಯಗಳು/ ಸಲಹೆಗಳು/ಆಕ್ಷೇಪಣೆಗಳನ್ನು ಸ್ವೀಕರಿಸಿದ್ದೇವೆ. ಅದನ್ನು ದಾಖಲಿಸಲಾಗುವುದು. ಈ ಸಭೆಯ ನಡವಳಿಯನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ದಾಖಲಿಸಿ, ಛಾಯಾಚಿತ್ರಗಳ (ಪ್ರತಿಯನ್ನು **ಅನುಬಂಧ–7** ರಲ್ಲಿ ಲಗತ್ತಿಸಲಾಗಿದೆ) ವಿಡಿಯೋ ಇರುವ ಸಿ.ಡಿ. ಗಳ (ಪ್ರತಿಯನ್ನು **ಅನುಬಂಧ–8** ರಲ್ಲಿ ಲಗತ್ತಿಸಲಾಗಿದೆ) ಇದನ್ನು ಕೇಂದ್ರ ಪರಿಸರ ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ಕೋರಮಂಗಲ, ಬೆಂಗಳೂರು. ಇವರಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕೇಂದ್ರ ಕಛೇರಿ ಬೆಂಗಳೂರು ರವರ ಮುಖಾಂತರ ಕಳುಹಿಸಿಕೊಡಲಾಗುವದು ಎಂದು ತಿಳಿಸಿದರು.

ಈ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ಸಾರ್ವಜನಿಕರಿಗೆ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಧನ್ಯವಾದಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

**ಡಾ.ದೊಡ್ಡಶಾನಯ್ಯ**
ಹಿರಿಯ ಪರಿಸರ ಅಧಿಕಾರಿ(ಪ್ರಭಾರ)
ಕ.ರಾ.ಮಾ.ನಿ.ಮಂ.ವಲಯ ಕಛೇರಿ, ಬಳ್ಳಾರಿ

**ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ)**
ಅಪರ ಜಿಲ್ಲಾಧಿಕಾರಿಗಳು ಹಾಗೂ
ಬಳ್ಳಾರಿ ಅಪರ ಜಿಲ್ಲಾ ದಂಡಾಧಿಕಾರಿಗಳು, ಅಧ್ಯಕ್ಷರು
ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ

## ಅನುಬಂಧ

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.

2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.

3. ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ಹೊಸದಿಗಂತ (ಕನ್ನಡ) ಹಾಗೂ ಟೈಮ್ಸ್ ಆಫ್ ಇಂಡಿಯಾ (ಆಂಗ್ಲ) ಗಳಲ್ಲಿ ದಿನಾಂಕ 12-07-2022 ರಂದು ಪತ್ರಿಕಾ ಪ್ರಕಟಣೆ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಈ ನಮ್ಮ ಕನ್ನಡ ನಾಡು" ಪತ್ರಿಕೆಯಲ್ಲಿ ದಿನಾಂಕ: 13-07-2022 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯ ಪ್ರತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಲಾಗಿದೆ.

4. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಚಾರಕ್ಕಾಗಿ ದಿನಾಂಕ 11-08-2022 ರಂದು ಕರಪತ್ರಗಳನ್ನು ವಿತರಿಸಲಾದ ಮತ್ತು ಧ್ವನಿವರ್ಧಕಗಳ ಮುಖೇನ ಯೋಜನಾ ಸ್ಥಳದ ಸುತ್ತಮುತ್ತಲ ಗ್ರಾಮಗಳಲ್ಲಿ ಸಾರ್ವಜನಿಕವಾಗಿ ಪ್ರಚಾರ ಮಾಡಲಾದ ಸಮಯದಲ್ಲಿ ತೆಗೆದುಕೊಂಡ ಛಾಯಾಚಿತ್ರಗಳ ಪ್ರತಿಯನ್ನು **ಅನುಬಂಧ-4** ರಲ್ಲಿ ಲಗತ್ತಿಸಲಾಗಿದೆ.

5. ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ರವರ ಅಧಿಕೃತ ಜ್ಞಾಪನಾ ಪತ್ರದ ದಿನಾಂಕ 25-07-2022 ರ ಅನ್ವಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರಿಗೆ ಅಧಿಕಾರ ನೀಡಿ ದಿನಾಂಕ : 12-08-2022 ರಂದು ನಡೆಯುವ ಪರಿಸರ ಆಲಿಕೆ ಸಭೆಯನ್ನು ನಡೆಸಲು ಆದೇಶಿಸಿರುತ್ತಾರೆ. ಸದರಿ ಜ್ಞಾಪನಾ ಪತ್ರದ ಪ್ರತಿಯನ್ನು **ಅನುಬಂಧ-5** ರಂತೆ ಲಗತ್ತಿಸಿದೆ.

6. ಸಾರ್ವಜನಿಕರಿಂದ ಪ್ರಾದೇಶಿಕ ಕಛೇರಿ ಬಳ್ಳಾರಿಯಲ್ಲಿ ಸ್ವೀಕೃತಿಯಾದ ಒಟ್ಟು 12 ಲಿಖಿತ ಹೇಳಿಕೆ/ ಆಕ್ಷೇಪಣೆಗಳು ಸ್ವೀಕೃತಿಯಾಗಿದ್ದು, ಪರಿಸರ ಸಾರ್ವಜನಿಕ ಸಭೆಯ ಸಮಯದಲ್ಲಿ ಒಟ್ಟು 40 ಲಿಖಿತ ಹೇಳಿಕೆ/ ಆಕ್ಷೇಪಣೆಗಳುಸ್ವೀಕೃತಿಯಾಗಿರಯತ್ತವೆ ಅವುಗಳನ್ನು **ಅನುಬಂಧ-6** ರಲ್ಲಿ ಲಗತ್ತಿಸಲಾಗಿದೆ.

7. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಕ್ರಿಯೆಯ ಛಾಯಾಚಿತ್ರಗಳ ಪ್ರತಿಯನ್ನು **ಅನುಬಂಧ-7** ರಲ್ಲಿ ಲಗತ್ತಿಸಲಾಗಿದೆ.

8. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ. ಗಳ ಪ್ರತಿಯನ್ನು **ಅನುಬಂಧ-8** ರಲ್ಲಿ ಲಗತ್ತಿಸಲಾಗಿದೆ.

**ಡಾ.ದೊಡ್ಡಶಾನಯ್ಯ**
ಹಿರಿಯ ಪರಿಸರ ಅಧಿಕಾರಿ(ಪ್ರಭಾರ)
ಕ.ರಾ.ಮಾ.ನಿ.ಮಂ.ವಲಯ ಕಛೇರಿ, ಬಳ್ಳಾರಿ

**ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ)**
ಅಪರ ಜಿಲ್ಲಾಧಿಕಾರಿಗಳು ಹಾಗೂ
ಬಳ್ಳಾರಿ ಅಪರ ಜಿಲ್ಲಾ ದಂಡಾಧಿಕಾರಿಗಳು, ಅಧ್ಯಕ್ಷರು
ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ